**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 1146/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹದೇವಶೆಟ್ಟಿ |
| ತಂದೆಯ ಹೆಸರು | : | ಬುಂಡಶೆಟ್ಟಿ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕರಳಾಪುರ, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 02.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ–1 ರಿಂದ 3 ರವರು ನನಗೆ ಪರಿಚಯವಿರುತ್ತಾರೆ. ಆರೋಪಿಗಳು ನಮ್ಮ ಗ್ರಾಮದವರು. ಸುಮಾರು 5 ವರ್ಷಗಳ ಹಿಂದೆ ರಾತ್ರಿ 8.00 ಗಂಟೆ ಸಮಯದಲ್ಲಿ ಚಾಸಾ–1ರವರ ಜಮೀನಿನಲ್ಲಿ ಭತ್ತ ಕಟಾವು ಮಾಡಿಸುವಾಗ 1ನೇ ಆರೋಪಿ ಬಂದು ತನ್ನ ಜಮೀನಿನಲ್ಲಿ ಏಕೆ ಕಟಾವು ಮಾಡಿಸುತ್ತಿದ್ದೀರಿ ಎಂದು ಕೇಳಿದಾಗ ಚಾಸಾ–1 ತನ್ನ ಜಮೀನು ಎಂದು ಹೇಳಿರುತ್ತಾರೆ. ಆಗ 1 ನೇ ಆರೋಪಿ ಮತ್ತು ಚಾಸಾ–1ರವರ ನಡುವೆ ಗಲಾಟೆಯಾಗಿ 1 ನೇ ಆರೋಪಿ ಚಾಸಾ–1ರವರಿಗೆ ಕೈಯಿಂದ ಅವರ ಮೈ ಕೈಗೆ ಹೊಡೆದು ಕಾಲಿನಿಂದ ಒದ್ದು, ಅವರ ರವಿಕೆಯನ್ನು ಕಿತ್ತುಹಾಕಿರುತ್ತಾರೆ. 2 ರಿಂದ 5ನೇ ಆರೋಪಿಗಳು ಬಂದು ಯಾವುದೇ ರೀತಿ ಗಲಾಟೆ ಮಾಡಬೇಡಿ ಎಂದು ಸಮಾಧಾನ ಮಾಡಿರುತ್ತಾರೆ. 1ನೇ ಆರೋಪಿ ಚಾಸಾ–2ರವರ ಜೊತೆಯೂ ಗಲಾಟೆ ಮಾಡಿ ಹೊಡೆಯಲು ಹೋದಾಗ ನೀವು ಒಂದೇ ಕುಟುಂಬದವರು ಈ ರೀತಿ ಮಾಡಬೇಡಿ ಎಂದು ನಾನು ಮತ್ತು ಚಾಸಾ–3 ಸಮಾಧಾನ ಮಾಡಿರುತ್ತೇವೆ.

ನಂತರ ಚಾಸಾ-2 ರವರು ತನ್ನ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಚಾಸಾ-1 ರವರು ದೂರು ಕೊಟ್ಟ ನಂತರ ಪೊಲೀಸರು ಜಮೀನಿನ ಬಳಿ ಬಂದು ಸಂಜೆ 4.00-4.45 ಗಂಟೆಯವರೆಗೆ ಮಹಜರ್ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ಚಾಸಾ-3 ಇದ್ದೆವು. ನಾನು ಹೆಬ್ಬೆಟ್ಟು ಗುರುತು ಹಾಕಿರುತ್ತೇನೆ. ಸಾಕ್ಷಿಯು ನಿಪಿ-2 ರಲ್ಲಿರುವ ತನ್ನ ಹೆಬ್ಬೆಟ್ಟು ಗುರುತನ್ನು ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಹೆಬ್ಬೆಟ್ಟು ಗುರುತನ್ನು **ನಿಪಿ-2(ಸಿ)** ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರಗಳನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀಸವಾಲುಃ ಸ.ಸ.ಅ ರವರಿಂದಃ</u>**

ಆರೋಪಿಗಳು ಅಕ್ರಮ ಗುಂಪು ಸೇರಿ ಚಾಸಾ-1 ರವರನ್ನು ಉದ್ದೇಶಿಸಿ ಬೋಳಿಮಗಳೆ, ಸೂಳೆಮಗಳೆ ಎಂದು ಬೈದಿರುತ್ತಾರೆ ಎಂದರೆ 1 ನೇ ಆರೋಪಿ ಮಾತ್ರ ಬೈದಿರುತ್ತಾರೆ. 1 ನೇ ಆರೋಪಿ ಚಾಸಾ-1 ರವರನ್ನು ತಬ್ಬಿ ಹಿಡಿದುಕೊಂಡು ಕೈಯಿಂದ ಅವರ ಹಣೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ-1 ರವರಿಗೆ ಮಾನಭಂಗ ಮಾಡುವ ಉದ್ದೇಶದಿಂದ ಅವರ ರವಿಕೆಯನ್ನು ಹರಿದುಹಾಕಿರುತ್ತಾರೆ ಎಂದರೆ ಸರಿ. ಉಳಿದ ಆರೋಪಿಗಳು ಚಾಸಾ-1 ಮತ್ತು 2 ರವರಿಗೆ ಕೈಯಿಂದ ಹೊಡೆದು ಮತ್ತು ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ-1 ರವರನ್ನು ಏನಾದರೂ ಆಗಲಿ ಮುಗಿಸಿಬಿಡೋಣ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಗಲಾಟೆಯ ಬಗ್ಗೆ ಚಾಸಾ-1 ರವರನ್ನು ವಿಚಾರಿಸಿದಾಗ ಸರ್ವೆ ನಂ. 88 ರ ಜಮೀನಿನ ವಿಚಾರವಾಗಿ ಗಲಾಟೆ ಮಾಡಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಈ ಎಲ್ಲಾ ವಿಚಾರಗಳನ್ನು ಪೊಲೀಸರು ಕೇಳಿದಾಗ ಹೇಳಿರುತ್ತೇನೆ

ಎಂದರೆ ಸರಿ. 1 ನೇ ಆರೋಪಿ ಹರಿದುಹಾಕಿದ್ದ ರವಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಮುದ್ದೆ ಮಾಲು–1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಇ.ಎಂ.ಕೆ, ವಕೀಲರಿಂದಃ**

ನಾನು ರೈತ ಸಂಘದ ನಾಯಕನಾಗಿರುತ್ತೇನೆ ಎಂದರೆ ಸರಿ. ನನಗೆ 1 1/2 ಎಕರೆ ಜಮೀನು ಇರುತ್ತದೆ. ನಾನು ಕೂಲಿ ಕೆಲಸಕ್ಕೆ ಹೋಗುತ್ತೇನೆ. ನಾನು ಯಾವುದೇ ಕೂಲಿ ಕೆಲಸಕ್ಕೆ ಹೋಗುವುದಿಲ್ಲ ಎಂದರೆ ಸರಿಯಲ್ಲ. ಗಲಾಟೆ ಸಂದರ್ಭದಲ್ಲಿ ಅಕ್ಕ–ಪಕ್ಕದ ಜಮೀನಿನವರು ಯಾರು ಇರಲಿಲ್ಲ. ಗಲಾಟೆ ನಡೆಯಿತು ಎಂದು ಹೇಳಿದ ಸಂದರ್ಭದಲ್ಲಿ ಕತ್ತಲೆ ಇದ್ದುದರಿಂದ ಯಾರು ಎಲ್ಲಿಗೆ ಹೊಡೆದಿರುತ್ತಾರೆಂದು ನನಗೆ ಗೊತ್ತಾಗಿರುವುದಿಲ್ಲ ಎಂದರೆ ನಾನು ನೋಡಿರುತ್ತೇನೆ. ಚಾಸಾ–1 ರವರ ತೋಳಿಗೆ ಏಟಾಗಿರುತ್ತದೆ. ಸರ್ವೆ ನಂ. 88 ರ ಜಮೀನಿನ ಒಂದು ಭಾಗದಲ್ಲಿ 1 ನೇ ಆರೋಪಿ ಮತ್ತು ಮತ್ತೊಂದು ಭಾಗದಲ್ಲಿ ಚಾಸಾ–1 ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. 1 ನೇ ಆರೋಪಿ ಬೆಳೆದಿದ್ದ ಭತ್ತವನ್ನು ಚಾಸಾ–1 ರವರು ಕಟಾವು ಮಾಡುತ್ತಿರಲಿಲ್ಲ. 1 ಎಕರೆ ಜಮೀನಿನ ಖಾತೆ 1 ನೇ ಆರೋಪಿಯ ಹೆಸರಿನಲ್ಲಿರುತ್ತದೆ. ವಸಂತಮ್ಮರವರು ನಂಜನಗೂಡು ಪಟ್ಟಣದಲ್ಲಿ ವಾಸವಿದ್ದು, ಅವರ ಗಂಡ ಮೃತಪಟ್ಟ ನಂತರ ಬೆಂಗಳೂರಿನಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಚಾಸಾ–1 ರವರ ಜಮೀನನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ನಾನು ಹೇಳಿದಂತೆ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ 1 ನೇ ಆರೋಪಿ ಚಾಸಾ–1 ರವರ ರವಿಕೆಯನ್ನು ಹರಿದುಹಾಕಿಲ್ಲ ಮತ್ತು ಯಾವುದೇ ರೀತಿ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಮಹಜರ್ ಮಾಡಲು ಬಂದಾಗ ಮುದ್ದೆ ಮಾಲು–1 ರವಿಕೆ ಜಮೀನಿನಲ್ಲಿ ಬಿದ್ದಿತ್ತು. ಗಲಾಟೆ ನಡೆದ 3 ದಿನಗಳ ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆದಿದ್ದರು. ಠಾಣೆಯಲ್ಲಿ ಪೊಲೀಸರು ನನ್ನ ಸಹಿ ಪಡೆದಿಲ್ಲ. ಮಹಜರ್ ನಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಮಹಜರ್ ಸಮಯದಲ್ಲಿ ಅಕ್ಕ–ಪಕ್ಕದ ಜಮೀನಿನವರು ಯಾರು ಇರಲಿಲ್ಲ. ನಾನು ಹೇಳಿದಂತೆ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋಗಿ ಮಹಜರ್ ಗೆ ಹೆಬ್ಬೆಟ್ಟು ಗುರುತು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು–1 ಚಾಸಾ–1 ರವರಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ನಾನು ಹೆಬ್ಬೆಟ್ಟು ಗುರುತು ಹಾಕುವಾಗ ನನ್ನ ಜೊತೆ ಬೇರೆ ಯಾರು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ–1 ರವರ ಜಮೀನನ್ನು ನೋಡಿಕೊಳ್ಳುತ್ತಿರುವುದರಿಂದ ಅವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ:</u>** ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/–

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**